ಠಾಣೆಗೆ ಕರೆದುಕೊಂಡು ಹೋಗಿ ಬಟ್ಟೆಗಳನ್ನು ಕಳಚಿ ಲಾಕಪ್‌ಗೆ ತಳ್ಳಿಬಿಟ್ಟರು. ರಾತ್ರಿ ಸುಮಾರು ೧೨ ಗಂಟೆಗೆ ಸ್ಟೇಷನ್‌ಗೆ ಸಬ್‌ಇನ್ಸ್‌ಪೆಕ್ಟರ್ ಬಂದು ನಿಮ್ಮ ಅಣ್ಣನ ಮಗನ ಹೆಂಡ್ತಿ ಬಾವಿಗೆ ಬಿದ್ದು ಸತ್ತಿದ್ದಾಳೆ. ಅವಳ ಗಂಡನಿಂದಲೇ ಆಕೆ ಸತ್ತಿರುವುದು. ನಿಮ್ಮ ಅಣ್ಣನ ಮಗನನ್ನು ತಂದು ಒಪ್ಪಿಸದಿದ್ದರೆ, ನಿನ್ನನ್ನು ಇಲ್ಲೆ ಕೊಳೆಯಿಸಿ ಸಾಯಿಸುತ್ತೇನೆ ಎಂಬುದಾಗಿ ಹೇಳಿ, ಆತನಿಗೂ ಊಟ ತಿಂಡಿ ಕೊಡದೆ ರಾತ್ರಿಯೆಲ್ಲಾ ಲಾಕಪ್‌ನಲ್ಲಿ ಇರಿಸಿದರು. ಹುಲಿಯಪ್ಪ ಪೋಲೀಸ್ ಸ್ಟೇಷನ್‌ನಲ್ಲಿ ಹೊಟ್ಟೆ ಹಸಿವಿನಿಂದ ರಳುತ್ತಿರುವಾಗ ೧೦-೬-೦೬ರ ಮಧ್ಯಾಹ್ನ ಈತನ ಅಣ್ಣನ ಮಗನು ತನ್ನ ಹೆಂಡತಿ ಕಾಣೆಯಾಗಿದ್ದಾಳೆಂದು ದೂರು ಕೊಡಲು ಬಂದಾಗ ಆತನನ್ನು ಪೋಲೀಸ್ ಸ್ಟೇಷನ್‌ನಲ್ಲಿ ಇರಿಸಿಕೊಂಡರು. ಬಾವಿಗೆ ತಾನಾಗಿಯೇ ಬಿದ್ದು ಸತ್ತಿರುವುದೆಂದು ನಂತರ ವೈದ್ಯಕೀಯ ಪರೀಕ್ಷೆ ಇಂದ ತಿಳಿದು ಬಂದಿತು, ಆಗ ಹುಲಿಯಪ್ಪನನ್ನು, ಆಕೆಯ ಗಂಡನನ್ನು ಶವಸಂಸ್ಕಾರಕ್ಕೂ ಬಿಡಲಿಲ್ಲ. ಮೂರು ದಿನಗಳ ಕಾಲ ಠಾಣೆಯಲ್ಲಿಟ್ಟುಕೊಂಡು ೧೩-೬-೦೬ರಂದು ಬಿಡುಗಡೆ ಮಾಡಿದರು. ಈ ಬಗ್ಗೆ ಪೋಲೀಸ್ ಇಲಾಖೆಯ ಎಲ್ಲಾ ವರ್ಗದ ಅಧಿಕಾರಿಗಳಿಗೂ ಹುಲಿಯಪ್ಪ ದೂರು ಕೊಟ್ಟಾಗ್ಯೂ ಸಹ ಇದುವರೆವಿಗೂ ಯಾವ ರೀತಿಯ ವಿಚಾರಣೆ ಮಾಡಲಿಲ್ಲ. ಇದಾದನಂತರ ಕೂಳ್ಳೇಗಾಲದ ಪ್ರಾಥಮಿಕ ಸಹಕಾರ ಕೃಷಿ ಹಾಗೂ ಗ್ರಾಮೀಣ ಬ್ಯಾಂಕಿನ ನಿರ್ದೇಶಕರಾದ ಶ್ರೀ ಹಲಗೇಗೌಡರನ್ನು ಸಹಾ ಡಿ.ಎಸ್.ಪಿ. ಕರೆದುಕೊಂಡು ಹೋಗಿ ದೊಣ್ಣೆ ಮುರಿದು ಹೋಗುವ ವರೆವಿಗೂ ಹೊಡೆದಿದ್ದಾರೆ. ಈ ಬಗ್ಗೆಯೂ ಸಹ ಮಾನ್ಯ ಗೃಹ ಸಚಿವರಿಗೆ ಪತ್ರ ಬರೆದಿರುತ್ತೇನೆ. ಇವರ ಬಗ್ಗೆ ಕೂಡ ಯಾವ ವಿಚಾರಣೆ ಇಲ್ಲವಾಗಿದೆ. ಕೊನೆಗೆ ಈ ಸದನದ ಮುಖಾಂತರವಾದರೂ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆದು, ಆ ಸಬ್-ಇನ್ಸ್‌ಪೆಕ್ಟರ್‌ರವರಿಂದ ಸಮಜಾಯಿಸಿ ತರಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹ ಪೂರ್ವಕವಾಗಿ ವಿನಂತಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈಗತಾನೇ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ವಿಚಾರಣೆ ಮಾಡಿ, ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ.

(II) ಪುತ್ತೂರು ತಾಲ್ಲೂಕಿನ ಸವಣೂರು ಪಣ್ಣಪ್ಪಾಡಿ ಗ್ರಾಮಗಳಲ್ಲಿ ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಸವಣೂರು ಪಣ್ಣಪ್ಪಾಡಿ ಗ್ರಾಮಗಳಲ್ಲಿ ಮಾರ್ಗದೀಪ ಮತ್ತು ಕೃಷಿಕರಿಗೆ, ಕೃಷಿ ನೀರಾವರಿ ಪಂಪು ಸೆಟ್ಟುಗಳಿಗಾಗಿ ವಿದ್ಯುತ್ ಮಂಜೂರಾಗಿ ಕಾಮಗಾರಿ ಪ್ರಾರಂಭಿಸಿ, ಕಂಬ, ವೈರಿಂಗ್, ಎಲ್ಲಾ ಕೆಲಸ ಪೂರ್ತಿಗೊಂಡಿದ್ದರೂ, ಈ ಕೆಲಸ ಮುಗಿದಿದ್ದು ಒಂದೂವರೆ ವರ್ಷಗಳು ಕಳೆದರೂ ಈ ವಿದ್ಯುತ್ ಲೈನಿನ ಪಕ್ಕದಲ್ಲಿ ರೈಲ್ವೆ ಲೈನ್ ಕ್ರಾಸ್ ಪಾಸಾಗುವುದು ಎಂಬ ನೆಪ ಹೇಳಿ ಈ ತನಕ ಇಲಾಖೆ ಯಾವುದೇ ತ್ವರಿತ ಕ್ರಮ ಕೈಕೊಳ್ಳದೆ ಇರುವುದು ಶೋಚನೀಯ. ಈ ಎರಡು ಗ್ರಾಮಗಳ ಸಾರ್ವಜನಿಕರು, ವಿದ್ಯುತ್ ಸೌಲಭ್ಯ ಪಡೆದು, ಕೃಷಿ ಪಂಪುಸೆಟ್ಟು, ಬ್ಯಾಂಕ್ ಸಾಲ ಪಡೆದು ಮತ್ತು ಇತರೆ ಹಣ ವೆಚ್ಚ ಮಾಡಿ ಬ್ಯಾಂಕ್ ಸಾಲಗಳನ್ನು ಎರಡು ವರ್ಷಗಳಿಂದ ಮರುಪಾವತಿ ಮಾಡಿ ಆಗಿದ್ದರೂ, ಮೋಟಾರು ಅಳವಡಿಸಿ ಕೃಷಿ ಸಾಗುವಳಿ ಮಾಡಲು, ನೀರು ಹಾಯಿಸಲು ವಿದ್ಯುತ್ ಸೌಲಭ್ಯ ಇನ್ನೂ ದೊರೆಯದೆ ತುಂಬಾ ಕಂಗೆಟ್ಟಿದ್ದಾರೆ.

ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಬಿಳಿನೆಲೆ ನೆಟ್ಟಣ ಕೃಷಿಕರು, ಕಳೆದ ೩ ವರ್ಷಗಳ ಹಿಂದಿನಿಂದ ಪಣ ಕಟ್ಟಿ ಕೃಷಿಗೆ ನೀರಾವರಿ ಪಂಪುಸೆಟ್ಟು ಪಡೆದು, ಸಾಲದ ಕಂತು ಮರು ಪಾವತಿ ಬ್ಯಾಂಕಿಗೆ ಮಾಡುತ್ತಿದ್ದರೂ, ಈ ವಿದ್ಯುತ್ ಪೂರೈಕೆಯ ಕೆಲಸ ೩ ವರ್ಷಗಳಾದರೂ ಪೂರ್ತಿಗೊಳಿಸದೆ, ವಿದ್ಯುತ್ ಪೂರೈಕೆ ಆಗಿರುವುದಿಲ್ಲ. ಕೃಷಿಕರು ನೀರು ಹಾಯಿಸಿ, ಬೆಳೆ ಬೆಳೆಸಲು ಅಸಹಾಯಕರಾಗಿದ್ದಾರೆ.

ಬಿಳಿನೆಲೆ ನೆಟ್ಟಣಕ್ಕೆ ಮಂಜೂರಾದ ವಿದ್ಯುತ್ ಪೂರೈಕೆ ಕೆಲಸವು ಸಂಪೂರ್ಣ ಪೂರ್ತಿಗೊಳ್ಳದೆ ಬಾಕಿ ಇದ್ದರೂ, ಆ ಕೆಲಸವನ್ನು ತಟಸ್ಥಗೊಳಿಸಿ, ಅದನ್ನು ಇತರ ಕಡೆಗೆ ಹೊಸದಾಗಿ ವಿದ್ಯುತ್ ಪೂರೈಕೆ ಕೇಳಿದವರಿಗೆ ದೊಡ್ಡ ಬಂಡವಾಳ ಶಾಹಿಗಳ ಪ್ರಭಾವಕ್ಕೆ ಒಳಗಾಗಿ ಅಧಿಕಾರಿಗಳು ಪ್ರಯತ್ನಿಸುತ್ತಿರುವ ವದಂತಿ ಕೂಡ ಇದೆ. ಆದುದರಿಂದ ಈ ಎರಡೂ ಕಡೆಗಳ ವಿದ್ಯುತ್ ಪೂರೈಕೆ ಕೆಲಸವನ್ನು ಆದಷ್ಟು ಶೀಘ್ರದಲ್ಲಿ ಪೂರೈಸುವಂತೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಮಗೆ ಇದು ಆಶ್ಚರ್ಯವಾಗುತ್ತಿಲ್ಲ. ಬೆಳಿಗ್ಗೆ ೯ ಗಂಟೆಗೆ ಸಭೆ ಪ್ರಾರಂಭವಾಗಿದೆ. ಸಂಬಂಧಪಟ್ಟ ಎಲ್ಲಾ ಮಂತ್ರಿಗಳು ಬೆಳಿಗ್ಗೆ ೯ ಗಂಟೆಗೆ ಸಭೆಗೆ ಏಕೆ ಬರುವುದಿಲ್ಲ ? ಅವರಿಗೆ ಏನಾಗಿದೆ ? ನಿನ್ನೆಯೂ ಕೂಡಾ ನಾವು ಕೇಳಿದೆವು. ತಾವು ಹೇಳತಕ್ಕ ರೀತಿ ಅವರು ನಡೆಯುವುದಿಲ್ಲವೆಂದರೆ ಹೇಗೆ ?

ಅಧ್ಯಕ್ಷರು.—ಇಲ್ಲ, ಅವರು ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಎಲ್ಲಿದ್ದಾರೆ ? ವಿಫಿಲಿಯೇಂಟ್ ಆಗಿ ಆಡಳಿತ ಮಾಡುವುದಕ್ಕೆ ೩೦ ಜನರ ಮಂತ್ರಿಮಂಡಲವನ್ನು ೧೬ ಜನಕ್ಕೆ ಇಳಿಸಿದ್ದಾರೆ. ಅವರೂ ಇಲ್ಲ ಎಂದು ಹೇಳಿದರೆ ಹೇಗೆ ?

ಅಧ್ಯಕ್ಷರು.—ಹೊರಗಡೆ ಇರುತ್ತಾರೆ. ಮುಖ್ಯಸಚೇತಕರು ಕರೆದುಕೊಂಡು ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಕರೆದುಕೊಂಡು ಬರುವವರೆಗೆ ನಾವು ಕುಳಿತು ಕೊಳ್ಳಬೇಕೆ ? ನಾವು ನಿಯಮ ೫೩ರ ಕೆಳಗೆ ಪ್ರಶ್ನೆ ಕೇಳುವುದು ಏಕೆ ? ನಾವು ಗಮನ ಸೆಳೆಯಬೇಕು, ಹಾಗೂ ಆ ಬಗ್ಗೆ ಅವರು ಸೂಚನೆ ಕೊಡಬೇಕು. ಕೆಲಸ ಆಗಬೇಕು. ಅವರು ಎಲ್ಲೋ ಇದ್ದು ಅವರ ಪರವಾಗಿ ಬೇರೆಯವರು ಉತ್ತರ ಹೇಳುತ್ತೇನೆಂದರೆ ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಖಾರ್ಗೆಯವರು ಹೇಳತಕ್ಕ ಪಾಯಿಂಟ್ ಸರಿಯಾಗಿದೆ. ಅಕಸ್ಮಾತ್ತಾಗಿ ಸದರೀ ಮಂತ್ರಿಗಳು ಇಲ್ಲದಿದ್ದರೆ ಅವರಿಂದ ಉತ್ತರವನ್ನು ತರಿಸಿಕೊಡುತ್ತೇನೆಂದು ನಾನು ಉತ್ತರ ಕೊಡುತ್ತಿದ್ದರೆ ಅವರಿಗೆ ಏಕೆ ತೊಂದರೆ ?

ಶ್ರೀ ಬಿ. ಮಲ್ಲಿಕಾರ್ಜುನ ಖಾರ್ಗೆ.—ಏನೋ ಕೆಲಸ ಇದೆ ಅಥವಾ ಮೀಟಿಂಗ್ ಇದೆ ಅಥವಾ ಬೇರೆ ಸದನ ಇದೆ ಎಂದರೆ ಆ ಪ್ರಶ್ನೆ ಬೇರೆ. ಈಗ ಇರುವುದು ಕೇವಲ ೧೬ ಜನ ಮಂತ್ರಿಗಳು. ಅವರೂ ಶಿಸ್ತು ಪಾಲಿಸಲಿಲ್ಲ ಎಂದರೆ ಹೇಗೆ ?

ಶ್ರೀ ಆರ್. ಪೆಂಕಟರಾಮಯ್ಯ.—ಕೇವಲ ೪ ಜನ ಮಂತ್ರಿಗಳು ಇಲ್ಲಿ ಇದ್ದಾರೆ. ಎಲ್ಲರೂ ಸಭೆಗೆ ಬರಲಿ.

ಅಧ್ಯಕ್ಷರು.—ತಾವು ಹೇಳುವುದು ಯೋಗ್ಯ ಇದೆ. ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ವಿಧಾನಪರಿಷತ್ತು ಇದ್ದರೆ ಅಲ್ಲಿ ಕುಳಿತ್ತಿದ್ದಾರೆಂದು ಹೇಳಬಹುದು. ಪದೇಪದೇ ನಾನು ಇದನ್ನು ಕೇಳುವುದಕ್ಕೆ ಆಸೆ ಇಲ್ಲ. ಯಾವ ದೊಡ್ಡ ಪುರಷಾರ್ಥಕ್ಕೆ ಈ ಸಭೆ ಮಾಡಬೇಕು ? ಬೆಳಿಗ್ಗೆ ೯ ಗಂಟೆಯಿಂದ ನಾವು ಇಲ್ಲಿ ಕುಳಿತ್ತಿದ್ದೇವೆ. ಈಗ ನಾವು ಪಟ್ಟು ಹಿಡಿದರೆ ತಮ್ಮ ಮನಸ್ಸಿಗೆ ನೋವಾಗಬಹುದು ಅಡಕೊಳ್ಳುತ್ತಿದ್ದೇವೆ. ಹೀಗೇ ಆದರೆ ನಾವು ಪಟ್ಟು ಹಿಡಿಯಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಲಕ್ಷ್ಮೀಸಾಗರ್ ಅವರೇ, ಅವರು ಹೇಳುವುದರಲ್ಲಿ ಸತ್ಯಾಂಶ ಇದೆ. ಬೇರೆ ವಿಷಯ ಆದರೆ ಆಡ್ಜೆ ಇಲ್ಲ. ನಿಯಮ ೫೩ರ ಕೆಳಗೆ ಎಲ್ಲಾ ಮಂತ್ರಿಗಳಿಗೆ ಸಂಬಂಧಪಟ್ಟ ವಿಷಯ ಬರುತ್ತದೆ. ಇಂತಹ ಟೈಮ್‌ನಲ್ಲಿ ಅವರುಗಳು ಇದ್ದರೆ ನಿಮಗೂ ಒಳ್ಳೆಯದು. ನಿಮಗೂ ಒಳ್ಳೆಯ ಹೆಸರು ಬರುತ್ತದೆ. ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾಳೆ ಎಲ್ಲರೂ ಬರುವ ಹಾಗೆ ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧಿವೇಶನ ಬಹಳ ದಿವಸ ಇದೆಯೆಂದರೆ ಮುಂದೆ ಉತ್ತರ ತರಿಸಿ ಕೊಡಬಹುದೆಂದು ನಾವು ತಿಳಿದುಕೊಳ್ಳಬಹುದು. ಇವತ್ತು ಬೆಳಿಗ್ಗೆಯೂ ಕೂಡಾ ಒಬ್ಬಿಬ್ಬರೂ ಸದಸ್ಯರನ್ನು ಬಿಟ್ಟರೆ ಬೇರೆ ಸದಸ್ಯರ ಪ್ರಶ್ನೆಗಳು ಅನೇಕ ಮಂತ್ರಿಗಳು ಇಲ್ಲದೆ ಮುಂದೆ ಹೋದವು. ಈ ಅಧಿವೇಶನ ಮುಂದಿನ ಶುಕ್ರವಾರ ಮುಕ್ತಾಯವಾಗುತ್ತದೆ. ಉತ್ತರವನ್ನು ಯಾವಾಗ ತರಿಸಬೇಕು ? ಯಾವಾಗ ಅವನ್ನು ನಾವು ಪಡೆಯಲಾಗುತ್ತದೆ ? ಸದಸ್ಯರ ಹಕ್ಕಿನ ಪ್ರಶ್ನೆ ತಿರಸ್ಕೃತ ಏನಾಗುತ್ತದೆ ? ತಾವು ಅವರ ಹಕ್ಕನ್ನು ಕಾಪಾಡಬೇಕು ಇದ್ದರೆ ಆರ್ಥ ಏನಿದೆ ? ನಾವು ಏತಕ್ಕೆ ಇಲ್ಲಿ ಕುಳಿತು ಕೊಳ್ಳಬೇಕು ? Better we close down everything and get out from here.

MR. SPEAKER.—Mr. Neelakantappa, you read out your 334-notice.

ಒಬ್ಬ ಮಾನ್ಯ ಸದಸ್ಯರು.—ತಾವು ಮನೆಗೆ ಉತ್ತರ ಕಳುಹಿಸಿಕೊಡುತ್ತೀರೆಂದು ನಾವು ಕೇಳುವುದಿಲ್ಲ. ತಾವು ದೊರಕಿಸಿಕೊಡುವುದಾದರೆ...

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಈ ವಿಚಾರವನ್ನು ಬರೆದು ತಿಳಿಸುತ್ತೇನೆ. ಎಲ್ಲರೂ ಹಾಜರಿ ಇರುವುದಕ್ಕೆ ನಾನು ಅವರಿಗೆ ತಿಳಿಸುತ್ತೇನೆ. ಹಾಗೂ ಎಲ್ಲರಿಗೂ ನಾನು ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಲೆನೋವಿಗೂ ಅದೇ, ಮೈ ನೋವಿಗೂ ಅದೇ, ಶೀತಕ್ಕೂ ಅದೇ ಔಷಧಿ ಇದ್ದಹಾಗೆ ಲಕ್ಷ್ಮೀಸಾಗರ್ ಅವರೇ ಉತ್ತರ ಕೊಡುವುದು ಬೇಡ.

ಅಧ್ಯಕ್ಷರು.—ಮಾನ್ಯ ನೀಲಕಂಠಪ್ಪನವರೇ, ನಿಮ್ಮ ಪ್ರಶ್ನೆ ಕೇಳಿ.

ಶ್ರೀ ಬಿ.ಆರ್. ನೀಲಕಂಠಪ್ಪ.—ಸಂಬಂಧಪಟ್ಟ ಮಂತ್ರಿಗಳೇ ಇಲ್ಲ. ಓದುವುದೇ ಅಥವಾ ಬೇಡವೇ ?

ಅಧ್ಯಕ್ಷರು.—ಓದಿ ಹೇಳಿ ಸ್ವಾಮಿ.

ಶ್ರೀ ಬಿ.ಆರ್. ನೀಲಕಂಠಪ್ಪ.—ಓದುವುದೇ ?

ಅಧ್ಯಕ್ಷರು.—ನಾನು ಓದಿ ಹೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಮಂತ್ರಿಗಳು ಬಂದಮೇಲೆ ಸೋಮವಾರ ಇದನ್ನು ತೆಗೆದು ಕೊಳ್ಳಲಿ.

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್ ಅವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ನೀಲಕಂಠಪ್ಪನವರೇ ತಾವು ಓದಿ ಸ್ವಾಮಿ.

ಶ್ರೀ ಬಿ.ಆರ್. ನೀಲಕಂಠಪ್ಪ.—ತರೀಕೆರೆ ತಾಲ್ಲೂಕಿನಲ್ಲಿ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಇಲ್ಲಿ ಓದಿ ಏನು ಪ್ರಯೋಜನ ? ಅದಕ್ಕೆ ಉತ್ತರ ಬರುವುದಿಲ್ಲ. ಅವರೂ ಏನೂ ಮಾಡುತ್ತಾರೆ ಪಾಪ.....

ಅಧ್ಯಕ್ಷರು.—ಇವತ್ತು ಬಂದಿಲ್ಲ. ಸೋಮವಾರದಿಂದ ಎಲ್ಲರೂ ಇರುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ತಿಳಿಸುತ್ತೇನೆ.

ಶ್ರೀ ಧರ್ಮಸಿಂಗ್.—೭೦ ಶಾಸಕರು ಮತ್ತೊಂದು ಮೆಮೊರ್ಯಾಂಡಮ್ ಕೊಟ್ಟಿದ್ದಾರೆ. ಇವತ್ತು ಬೇರೆ ಬೇರೆ ಕಡೆ ಮಂತ್ರಿಗಳು ಇದ್ದಾರೆ. ಸರ್ಕಾರದ ಕಾರ್ಯ ಕಲಾಪದಲ್ಲಿ ಯಾರಿಗೂ ಆಭಿರುಚಿ ಇಲ್ಲ. ಆದಕ್ಕೇ ಅವರು ಬರುತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಕಬ್ಬಿಣದ ಅಂಗಡೀಲಿ ನೊಣಕ್ಕೆ ಏನು ಕೆಲಸ ?

ಅಧ್ಯಕ್ಷರು.—ನಮ್ಮ ಚಿಂತೆ ನಮಗೆ ಸಾಲದೆ ಪರರ ಚಿಂತೆನಮಗ್ಯಾಕಯ್ಯ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ನೀಲಕಂಠಪ್ಪನವರ ವಿಷಯ ಇರಬಹುದು, ಅಥವಾ ಬೇರೆಯವರು ತಂದಿರುವ ವಿಷಯ ಇರಬಹುದು. ಅದನ್ನು ಇಲ್ಲಿ ಓದಿದ ತಕ್ಷಣ the subject matter will become the property of this august House. ಅದರ ಬಗ್ಗೆ ವಿಚಾರವನ್ನು ತಿಳಿದು ಕೊಳ್ಳಬೇಕಾಗುತ್ತದೆ. ಅದಕ್ಕೆ ಉತ್ತರ ಹೇಳದೆ ಇದ್ದರೆ ಗತಿ ಏನು ? ಇವೊತ್ತು ನಾವು ಒಂದು ಕೆಲಸ ಮಾಡೋಣ. ಕೊನೆಯ ಪಕ್ಷ ಸೋಮವಾರದಿಂದ ಪ್ರತಿಯೊಬ್ಬ ಮಂತ್ರಿಯವರೂ ಇಲ್ಲಿ ಇರಬೇಕು. ನಿಯಮ ೩೫೪ ಕೆಳಗೆ ಯಾವ ವಿಷಯ ಬರುತ್ತದೆಯೋ ಗೊತ್ತಿಲ್ಲ. ಈ ಬಗ್ಗೆ ತಾವು ಆದೇಶ ಕೊಡಬೇಕು. ತಾವು ಆ ಬಗ್ಗೆ ಕೇವಲ ಅಭಿಪ್ರಾಯಪಟ್ಟಿದ್ದೀರಿ. ಆದೇಶ ಯಾವಾಗ ಬರುತ್ತದೆಯೋ ನೋಡಬೇಕು. ತಾವು ಇದನ್ನು ಆದೇಶ ರೂಪದಲ್ಲಿ ಕೊಡತಕ್ಕದ್ದು ಅಗತ್ಯ ಇದೆ. ತಾವು ಈಗ ಕೊಟ್ಟಿರಿ ತಕ್ಕದ್ದು ತಮ್ಮ ಅಭಿಪ್ರಾಯವಷ್ಟೇ, ಅದು ಎಚ್ಚರಿಕೆಯಲ್ಲ. ಸೋಮವಾರ ಮಂತ್ರಿಮಂಡಲದ ಎಲ್ಲಾ ಸದಸ್ಯರು ಇಲ್ಲಿ ಇಲ್ಲದಿದ್ದರೆ ನಾವು ಬೇರೆ ಕ್ರಮದ ಬಗ್ಗೆ ಅನಿವಾರ್ಯವಾಗಿ ವಿಚಾರ ಮಾಡಬೇಕಾಗುತ್ತದೆ. ನಮಗೆ ಬೇರೆ ದಾರಿಯೇ ಉಳಿಯುವುದಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ನಾನು ಒಂದು ವಿಷಯವನ್ನು ಹೇಳುತ್ತೇನೆ. ಈ ವಿಷಯದ ಬಗ್ಗೆ ನಾನು ಹಿಂದಿನ ಸದನದಲ್ಲೇ ಸಿಸಿಳರ ಕೆಳಗೆ ಪ್ರಸ್ತಾಪ ಮಾಡಿದ್ದೆ. ಆದರೂ.....

ಅಧ್ಯಕ್ಷರು.—ತಾವು ಓದಿ ಸ್ವಾಮಿ. ಇಲ್ಲದಿದ್ದರೆ ಮುಂದಿನವರ ಹೆಸರನ್ನು ನಾನು ಕರೆಯುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ನನ್ನದೊಂದು ಸಣ್ಣ ಕ್ಲಾರಿಫಿಕೇಷನ್.....

ಅಧ್ಯಕ್ಷರು.—ತಾವು ಓದಿ ಹೇಳುತ್ತೀರೋ ಇಲ್ಲವೋ ?

ಶ್ರೀ ಬಿ. ಆರ್. ನೀಲಕಂಠಪ್ಪ.—ಸಣ್ಣ ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಹಿಂದಿನದಕ್ಕೆ ನನಗೆ ಲಿಖಿತ ಉತ್ತರ ಬಂದಿಲ್ಲ.

ಅಧ್ಯಕ್ಷರು.—ತಾವು ಓದದಿದ್ದರೆ ಬಂದ್ ಮಾಡಿ ಎಂದು ಹೇಳಬೇಕಾಗುತ್ತದೆ.

SRI S. BANGARAPPA.—The subject matter will become the property of this August House, if it is read. If he does not get reply, why should he read. ಇದೇ ಸಬ್ಜೆಕ್ಟ್ ಬಗ್ಗೆ ಹಿಂದಿನ ಸದನದಲ್ಲಿ ನಿಯಮ ೩೩ಳರ ಕೆಳಗೆ ಅವರು ಕೇಳಿದರು. ಮತ್ತೇ ಇದನ್ನು ಓದಿದರೆ ಇದರ ಗತಿಯೂ ಅದೇ ಆಗುತ್ತದೆ. So Hon. Member Mr. Neelakantappa is cent percent correct. ಹಿಂದೆ ಅವರು ಓದಿದ ೩೩ಳರ ಗತಿ ಏನಾಯಿತು ?

ಅಧ್ಯಕ್ಷರು.—ತಾವು ಓದುತ್ತಿರೋ ಇಲ್ಲವೋ ?

ಶ್ರೀ ಬಿ. ಆರ್. ನೀಲಕಂಠಪ್ಪ.—ನಾನು ಓದುತ್ತೇನೆ ಸ್ವಾಮಿ. ಹಿಂದೆ ಓದಿದ...

ಅಧ್ಯಕ್ಷರು.—ತಾವು ಓದಿ.

(III) ತರೀಕೆರೆ ತಾಲ್ಲೂಕು ಕೈಗಾರಿಕೆಯಲ್ಲಿ ಹಿಂದುಳಿದಿರುವ ಬಗ್ಗೆ

ಶ್ರೀ ಬಿ. ಆರ್. ನೀಲಕಂಠಪ್ಪ.—ತರೀಕೆರೆ ತಾಲ್ಲೂಕು ಇಡೀ ರಾಜ್ಯದಲ್ಲೇ ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕು ಆಗಿದೆ. ತರೀಕೆರೆಯಲ್ಲಿ ಸರಕಾರದ ಪತಿಯಿಂದ ಯಾವ ಕೈಗಾರಿಕೆಯೂ ಪ್ರಾರಂಭವಾಗಿಲ್ಲ. ದಿನೇ ದಿನೇ ಅಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಮತ್ತು ಸಣ್ಣ ಕೈಗಾರಿಕೆಯಲ್ಲೂ ಸಹಾ ಸರಕಾರದ ಯಾವ ಪ್ರೋತ್ಸಾಹವೂ ದೊರೆತಿಲ್ಲ. ಸಣ್ಣ ಕೈಗಾರಿಕೆಯನ್ನು ಸ್ಥಾಪಿಸಲು ಸ್ಥಳವನ್ನು ಸಹಾ ಸ್ವಾಧೀನಪಡಿಸಿಕೊಂಡಿಲ್ಲ ಜಮೀನನ್ನು ಸಹ ತೆಗೆದುಕೊಳ್ಳಲು ಇದರ ಬಗ್ಗೆ ಗಮನ ಪನ್ನೂ ಸಹ ತಾವು ಹರಿಸಿರುವುದಿಲ್ಲ. ಆದ್ದರಿಂದ ದಯಮಾಡಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗಾರಿಕಾ ಷೆಡ್ಡುಗಳನ್ನು ಹಾಗೂ ಸ್ಥಳವನ್ನು ಸಹ ಮಾಡಬೇಕಾಗಿಯೂ ಮತ್ತು ತಾವು ತಾಂತ್ರಿಕ ಸಹಕಾರ ಮತ್ತು ಸಣ್ಣ ಕೈಗಾರಿಕೆಯ ತರಬೇತಿಗೆ ಸೂಕ್ತ ಅವಕಾಶ ಕಲ್ಪಿಸಿಕೊಡುವಿರಾ ? ಯಾವಾಗ ಯಾವ ಯಾವ ಕ್ರಮ ತೆಗೆದುಕೊಳ್ಳುವಿರಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ನೀಲಕಂಠಪ್ಪನವರೇ, ಇದೇ ವಿಷಯವನ್ನು ತಾವು ಮುಂದಿನ ಅಧಿವೇಶನದಲ್ಲೂ ಎತ್ತಬೇಕಾಗುತ್ತದೆ.

೧೦-೩೦ ಎ.ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಅಭಿಪ್ರಾಯವು ಗೊತ್ತಾಗಿದೆ ಸಂಬಂಧಪಟ್ಟ ಮಂತ್ರಿಯವರಿಂದ ಅವರಿಗೆ ಉತ್ತರ ಒದಗಿಸಿಕೊಡುವ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ಏನಾಯಿತು.

ಅಧ್ಯಕ್ಷರು.—ತಾವು ಕೂಡಿ ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)